# ೦೯.೧೧.೨೦೧೨ರಂದು ನಡೆದ ಪ್ರಶಾಸನ ಸಮಿತಿ ೯ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೯ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನವೆಂಬರ್ ೦೯, ೨೦೧೨ರ ಶುಕ್ರವಾರ ಬೆಳಿಗ್ಗೆ ೦೯.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ** ಮಳಗಿ, ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಎಂಟನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 30.10.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಎಂಟನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಶಾಖಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮಕೈಗೊಳ್ಳಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಸಭೆಯ ಅನುಮೋದನೆಯಂತೆ ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ದಿನಾಂಕ: 06.11.2012ರಂದು ನಡೆದ ಹಣಕಾಸು ಸಮಿತಿ 7ನೇ ಸಭೆ ನಡಾವಳಿಯ ಅನುಮೋದನೆ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ 7ನೇ ಸಭೆಯು ದಿನಾಂಕ: 06.11.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಹಣಕಾಸು ಸಮಿತಿಯ ನಡಾವಳಿಯನ್ನು ಸಭೆಯು ಸಂಪೂರ್ಣವಾಗಿ ಪರಿಶೀಲಿಸಿತು. ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳ ಆಯ–ವ್ಯಯ ವಿವರಗಳಿಗೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 3: ದಿನಾಂಕ: 09.11.2012ರಂದು ನಡೆದ ಪ್ರಶಿಕ್ಷಣ ಪರಿಷತ್ತು 6ನೇ ಸಭೆ ನಡಾವಳಿಯ ಅನುಮೋದನೆ ಬಗೆಗೆ.**

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ 6ನೇ ಸಭೆಯು ದಿನಾಂಕ: 09.11.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಪ್ರಶಾಸನ ಸಮಿತಿಯ ಕಾರ್ಯಸೂಚಿಗಳೇ ಪ್ರಶಿಕ್ಷಣ ಪರಿಷತ್ತಿನಲ್ಲಿಯೂ ಮಂಡಿತವಾಗಿ ಅನುಮೋದಿಸಲ್ಪಟ್ಟಿದ್ದು, ಈ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಶಿಕ್ಷಣ ಪರಿಷತ್ತಿನ 6ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 4: ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಿ.ಲಿಟ್ ಪ್ರದಾನ ಮಾಡುವುದರ ಬಗೆಗೆ.**

ಟಿಪ್ಪಣಿ: ಮಾನ್ಯ ಕುಲಾಧಿಪತಿಗಳ ಅನುಮೋದನೆಯಂತೆ ಈ ಕೆಳಕಂಡ ಐವರು ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ ಉಪಾಧಿಯನ್ನು ನೀಡಲಾಗುತ್ತಿದೆ.

1. ಪಂಡಿತ ಸುಧಾಕರ ಚತುರ್ವೇದಿ
2. ವಿದ್ವಾನ್ ಎನ್. ರಂಗನಾಥಶರ್ಮಾ
3. ಪ್ರೊ. ಕೆ.ಟಿ. ಪಾಂಡುರಂಗಿ
4. ಪ್ರೊ. ಸಿ.ಜಿ. ಪುರುಷೋತ್ತಮ
5. ಡಾ. ಪರಡ್ಡಿ ಮಲ್ಲಿಕಾರ್ಜುನ

ನಿರ್ಣಯ: **ಸಭೆಯು ತುಂಬುಸಂತೋಷದಿಂದ ಗೌರವ ಡಿ.ಲಿಟ್ ಪದವಿ ಪ್ರದಾನ ಮಾಡಲು ತನ್ನ ಒಪ್ಪಿಗೆಯನ್ನು ನೀಡಿ ಅನುಮೋದಿಸಿತು.**

**ವಿಷಯ 5: 2010–11ನೇ ಸಾಲಿನಲ್ಲಿ ನಡೆದ ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ಉಪಾಧಿಗಳನ್ನು ಪ್ರದಾನ ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **174 ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ** ಹಾಗೂ **136 ವಿದ್ಯಾರ್ಥಿಗಳಿಗೆ ಎಂ.ಎ. ವಿದ್ವದುತ್ತಮಾ** ಉಪಾಧಿಯನ್ನು ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ತುಂಬುಸಂತೋಷದಿಂದ 174 ಬಿ.ಎ. ವಿದ್ವನ್ಮಧ್ಯಮಾ ಮತ್ತು 136 ಎಂ.ಎ. ವಿದ್ವದುತ್ತಮಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲು ತನ್ನ ಒಪ್ಪಿಗೆಯನ್ನು ನೀಡಿ ಅನುಮೋದಿಸಿತು.**

**ವಿಷಯ 6: ಆಯಾ ಶಾಸ್ತ್ರಭಾಗಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡುವ ಬಗೆಗೆ.**

ಟಿಪ್ಪಣಿ: 2010–11ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದ ಹನ್ನೆರಡು (12) ಮಂದಿ ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ. ಹನ್ನೆರಡು ಮಂದಿ ವಿದ್ಯಾರ್ಥಿಗಳು ಮತ್ತು ಶಾಸ್ತ್ರಭಾಗಗಳ ವಿವರ ಕೆಳಗಿನಂತಿದೆ:

| | | | |
|---|---|---|---|
| 1. | ಭೀಮಸೇನ | ಅಲಂಕಾರ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 2. | ನಾಗೇಂದ್ರ | ವ್ಯಾಕರಣ | ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 3. | ಅರ್ಜುನ ಎಸ್.ಆರ್. | ನವೀನನ್ಯಾಯ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 4. | ನಾಗರಾಜ ಭಟ್ | ಧರ್ಮಶಾಸ್ತ್ರ | ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 5. | ಸುಧೀಂದ್ರ | ಜ್ಯೋತಿಷ್ಯ | ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ |
| 6. | ಸಂತೋಷ್‌ಕುಮಾರ್ ಜೋಷಿ | ಪೂರ್ವಮೀಮಾಂಸಾ | ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 7. | ಹಯವದನ ಬಿ.ಎಸ್. | ದ್ವೈತವೇದಾಂತ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 8. | ಅರುಣ್‌ಕುಮಾರ್ ಎ.ಎಲ್. | ಅದ್ವೈತವೇದಾಂತ | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಆದಿಚುಂಚನಗಿರಿ |
| 9. | ಶ್ರೀಕಂಠ | ಜೈನಸಿದ್ಧಾಂತ | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |
| 10. | ರಮೇಶ ಭಟ್ಟ ಕೆ. | ಋಗ್ವೇದ ಘನಾಂತ | ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ |
| 11. | ರಾಜಶೇಖರ ವಿ.ಎಂ. | ಕೃಷ್ಣಯಜುರ್ವೇದ ಘನಾಂತ | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಆದಿಚುಂಚನಗಿರಿ |
| 12. | ಕೃಷ್ಣಮಾಚಾರ್ಯ ವಿ.ಎಸ್. | ಸಾಮವೇದ ಸ್ಮಾರ್ತಪ್ರಯೋಗ | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಸರ್ವೋತ್ಕೃಷ್ಟ ಶ್ರೇಣಿ ಪ್ರಮಾಣಪತ್ರ ಹಾಗೂ ರೂ. 5000/–ಗಳ ನಗದು ಪುರಸ್ಕಾರ ನೀಡಲು ಸಂತೋಷದಿಂದ ತನ್ನ ಒಪ್ಪಿಗೆಯನ್ನು ನೀಡಿ ಅನುಮೋದಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು